# ಮನೋಹರನ ಅಂತ್ಯ

ಬೆಚ್ಚಿಬಿದ್ದ ಮನೋಹರ. ‘ಈ ರಾತ್ರಿಯೇ ನಿನಗೆ ಕೊನೆಯ ರಾತ್ರಿ. ಯಾವ ಶಕ್ತಿಯೇ ಎದುರಾದರೂ ಸಹ ನಿನ್ನನ್ನು ಕಾಪಾಡಲು ಸಾಧ್ಯವಿಲ್ಲ. ಆದರೆ ಸಾವಿನ ಹತ್ತಿರ ಬಂದಿರುವ ನಿನಗೆ ರಹಸ್ಯವೊಂದನ್ನು ಹೇಳುತ್ತೇನೆ’ ಎಂದ ರುದ್ರನಾಗ.

ಆತುರಿದಂದ ‘ಏನದು?’ ಎಂದು ಕೇಳುತ್ತಾನೆ ಮನೋಹರ.

ರುದ್ರನಾಗ ‘ನನ್ನ ಕೈಯಿಂದಲೇ ನೀನು ನನ್ನ ಹೆಂಡತಿ ಮಕ್ಕಳ ಮೇಲೆ ಮಾಂತ್ರಿಕ ಪ್ರಯೋಗ ಮಾಡಿಸಿದೆ. ಈಗ ನಿನಗೂ ಸಹ ಅದೇ ಗತಿ ಬರುತ್ತದೆ.’ ಭಯಾಶ್ಚರ್ಯದಿಂದ ‘ಅಂದರೆ...’

ರುದ್ರನಾಗ ಕಟುವಾಗಿ ‘ನಿನ್ನ ರಕ್ತದ ಕುಡಿಯೇ ನಿನ್ನನ್ನು ಮತ್ತು ನಿನ್ನ ಸಂಸಾರದವರನ್ನು ಬಲಿ ತೆಗೆದುಕೊಳ್ಳುತ್ತಾಳೆ’

ಗಾಬರಿಯಿಂದ ‘ನೀವು ಏನು ಹೇಳುತ್ತಿದ್ದಿರಾ?’

‘ನಿನಗೆ ತಿಳಿಯದಿರುವ ಸಂಗತಿ...’

‘ಏನು... ಏನದು?’

ರುದ್ರನಾಗ ‘ಅರುಂಧತಿಯಲ್ಲಿ ಜನಿಸಿದ ಮಗುವನ್ನು ತೋಳ ಕಚ್ಚಿಕೊಂಡು ಹೋಗಿದ್ದು ನಿಜ. ಆದರೆ ನನ್ನ ಶಿಷ್ಯ ಇದನ್ನು ಆಕಸ್ಮಿಕವಾಗಿ ಕಂಡು ಕಾಪಾಡಿ ಮಗುವನ್ನು ಕರೆದುಕೊಂಡು ಬಂದ.’ ಎನ್ನುತ್ತಾನೆ.

